ಶ್ರೀ ಜಗದೀಶ್ ಶೆಟ್ಟರ್:- ಈ ಬಿಲ್ಲನ್ನು ನಾವು ಪ್ರೊಟಸ್ಟ್ ಮಾಡುತ್ತಿದ್ದೇವೆ. ರಾಜಕೀಯ ದುರುದ್ದೇಶದಿಂದ, ಕಾರ್ಯಕರ್ತರಿಗೆ ಪುನರ್‌ವಸತಿ ಮಾಡುವ ಸಲುವಾಗಿ ಈ ಬಿಲ್ಲನ್ನು ತಂದಿದ್ದಾರೆ. ಈ ರೀತಿ ಬಿಲ್ಲನ್ನು ತರುವಂಥಾದ್ದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವಕಾಶ ಕೊಡಬಾರದು. ಸನ್ಮಾನ್ಯ ಅಧ್ಯಕ್ಷರೇ, ತಮಗೂ ನಾವು ವಿನಂತಿ ಮಾಡುತ್ತಿದ್ದೇವೆ. ಇಂತಹ ಬಿಲ್ಲುಗಳಿಗೆ ತಾವು ಅವಕಾಶ ಕೊಡಬಾರದು. ಅಲ್ಲಿ ಹೇಳಿರುವಂಥ ಉದ್ದೇಶ ಬೇರೆ, ಇಲ್ಲಿ ಮಾತನಾಡುವಂಥಾದ್ದು ಬೇರೆ ರಾಜಕೀಯವಾಗಿ ಕಾರ್ಯಕರ್ತರಿಗೆ ಇವತ್ತು ಪುನರ್ ವಸತಿ ಮಾಡುವ ಸಲುವಾಗಿ ಇದನ್ನು ಮಾಡಿದ್ದಾರೆ. ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಸಿ. ಭೈರೇಗೌಡ:- ಅವರು ನಾವು ಮಾಡಿದ ವಾದವನ್ನು ಒಪ್ಪಿದ್ದಾರೆ. ನಾವು ಎಷ್ಟು ನಿಜ ಹೇಳಿದ್ದೇವೆ. ಬಹುಶಃ ಈ ಸದನದ ಅಪರೂಪದ ಘಟನೆಗಳಲ್ಲಿ ಇದೂ ಒಂದು. ವಿರೋಧ ಪಕ್ಷದವರ ವಾದವನ್ನು ಕೇಳಿ ಹೌದು ಎಂದು ಒಪ್ಪಿರತಕ್ಕಂಥಾದ್ದು ಬಹಳ ಅಪರೂಪದ ಘಟನೆಯಾಗಿದೆ. ಇನ್ನು ಮುಂದೆ ನಮಗೆ ಉಳಿದಿರತಕ್ಕಂಥಾದು ಏನೆಂದರೆ, ಇದನ್ನು ವಾಪಾಸ್ ತೆಗೆದುಕೊಳ್ಳಿ ಎಂದು ಹೇಳುವುದು. ಈ ಹೇಳತಕ್ಕಂಥಾದ್ದು ಒಂದು ಮಾಡತಕ್ಕಂಥಾದ್ದು ಒಂದು ಎಂಬ ಮೊಂಡುತನ ಬೇಡ. ಬಾಯಲ್ಲಿ ಹೇಳಿದ ರೀತಿಯಲ್ಲಿ ಕೆಲಸ ಮಾಡತಕ್ಕಂಥಾದ್ದು ಆಗಬೇಕು. ಇದನ್ನು ಪ್ರತಿಭಟನೆ ಮಾಡಿ ನಮ್ಮ ಪಕ್ಷದವರು ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ಎಂ. ಮಹದೇವ್:- ನಿಮ್ಮ ಸರಕಾರದಲ್ಲಿ ಏನು ಮಾಡಿದ್ದೀರಿ?

ಶ್ರೀ ಸಿ. ಭೈರೇಗೌಡ:- ನಮ್ಮ ಸರಕಾರದಲ್ಲಿ ನಾವು ಬೆಂಕಿ ಇಡಲಿಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಜೀರ್ಣ ಆಗುವಷ್ಟು ಬಹುಮತ ಇದೆ. ಇಷ್ಟಿದ್ದೂ ಇದನ್ನು ಏತಕ್ಕೆ ಮಾಡುತ್ತಾ ಇದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಾ ಇಲ್ಲ. Again you are antaginising your own workers ನಿಮ್ಮ ಬಾಕಿ ವರ್ಕರ್ಸ್‌ನ್ನು ಎಕ್ಸ್‌ಟ್ರಾ ಮಾಡಲು ಹೋಗಿ 500 ಜನ ಶತ್ರುಗಳನ್ನು ಕ್ರಿಯೇಟ್ ಮಾಡಿಕೊಳ್ಳುತ್ತಾ ಇದ್ದೀರಿ.

(ಮಾನ್ಯ ಜನತಾದಳದ ಮಾನ್ಯ ಸದಸ್ಯರುಗಳು ಸಭಾ ತ್ಯಾಗ ಮಾಡಿದರು)

ಶ್ರೀ ಎನ್ ಚಲುವರಾಯಸ್ವಾಮಿ (ನಾಗಮಂಗಲ) :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಎಲ್ಲಾ ಸದಸ್ಯರು ಸರಕಾರಕ್ಕೆ ಈ ಕುರಿತು ಮನವರಿಕೆ ಮಾಡಿಕೊಟ್ಟರೂ ಕೂಡ ಸರಕಾರದವರು ಐದು ಜನರಿಗೆ ಅವಕಾಶ ಕೊಡುವುದಕ್ಕೋಸ್ಕರವಾಗಿ ಏನು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಅದನ್ನು ವಾಪಸ್ ತೆಗೆದುಕೊಳ್ಳಲು ನಿರಾಕರಿಸುವುದನ್ನು ಪ್ರತಿಭಟಿಸಿ ನಾನೂ ಕೂಡ ಸಭಾತ್ಯಾಗ ಮಾಡುತ್ತೇನೆ.

(ಶ್ರೀ ಎನ್. ಚಲುವರಾಯ ಸ್ವಾಮಿಯವರು (ಜೆಡಿ-ಎಸ್) ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ಪ್ರಸ್ತಾಪ ಏನೆಂದರೆ "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಪೌರ ನಿಗಮ (ಎರಡನೇ ತಿದ್ದುಪಡಿ) ವಿಧೇಯಕ, 2002ನ್ನು ಪರ್ಯಾಲೋಚಿಸುವುದು.